# ಪ್ರಾರ್ಥನೆ

# ಶ್ರೀರಾಜರಾಜೇಶ್ವರೀ ಅಷ್ಟಕಮ್ – ೧



**ಅಂಬಾ ಶಾಂಭವಿ ಚಂದ್ರಮೌಲಿರಬಲಾಽಪರ್ಣಾ ಉಮಾ ಪಾರ್ವತೀ**
**ಕಾಲೀ ಹೈಮವತೀ ಶಿವಾ ತ್ರಿನಯನೀ ಕಾತ್ಯಾಯನೀ ಭೈರವೀ ।**
**ಸಾವಿತ್ರೀ ನವಯೌವನಾ ಶುಭಕರೀ ಸಾಮ್ರಾಜ್ಯಲಕ್ಷ್ಮೀಪ್ರದಾ**
**ಚಿದ್ರೂಪೀ ಪರದೇವತಾ ಭಗವತೀ ಶ್ರೀರಾಜರಾಜೇಶ್ವರೀ ॥ ೧ ॥**

ಅಮ್ಮಾ, ನೀನು ಶಂಭುಶಕ್ತಿಸ್ವರೂಪಿಣಿ, ಚಂದ್ರನನ್ನು ತಲೆಯಲ್ಲಿ ಧರಿಸಿರುವವಳು, ಅಬಲಾ, ಶಿವನನ್ನು ಹೊಂದಲು ಎಲೆಯನ್ನೂ ಸೇವಿಸದೆ ಗಂಭೀರ ತಪಸ್ಸನ್ನಾಚರಿಸಿದ ಅಪರ್ಣೆ, ಉಮಾ, ಪರ್ವತ ರಾಜಕುಮಾರಿಯಾದ ಪಾರ್ವತಿ, ಕಾಲಸ್ವರೂಪಿಣಿಯಾದ ಕಾಲಿ, ಜ್ಞಾನದ ಅಧಿದೇವತೆಯಾದ ಹೈಮವತೀ, ಮಂಗಳಕರ ಶಿವ ಸ್ವರೂಪಿಣಿ, ಮೂರು ಕಣ್ಣುಗಳುಳ್ಳವಳು, ಕಾತ್ಯಾಯನ ಋಷಿಯ ಮಗಳಾದ ಕಾತ್ಯಾಯನಿ, ಭಯವನ್ನು ಹುಟ್ಟಿಸುವ ಭೈರವೀ, ಸೂರ್ಯನ ಶಕ್ತಿಯನ್ನು ಹೊಂದಿರುವ ಸಾವಿತ್ರೀ, ಸದಾ ನವ ಯೌವನದಿಂದ ಕೂಡಿರುವವಳು, ಶುಭವನ್ನು ಉಂಟುಮಾಡುವವಳು, ಸಾಮ್ರಾಜ್ಯಲಕ್ಷ್ಮಿಯನ್ನು ಕರುಣಿಸುವವಳು, ಜ್ಞಾನರೂಪಿಣಿ, ಪರದೇವತೆ, ಮಾತೃಸ್ವರೂಪಿಣಿಯಾದ ಭಗವತಿ, ನೀನೇ ಶ್ರೀ ರಾಜರಾಜೇಶ್ವರಿಯಾಗಿ ವಿರಾಜಿಸುತ್ತಿರುವೆ.

**ಅಂಬಾ ಮೋಹಿನಿ ದೇವತಾ ತ್ರಿಭುವನೀ ಆನಂದಸಂದಾಯಿನೀ**
**ವಾಣೀ ಪಲ್ಲವಪಾಣಿವೇಣುಮುರಲೀಗಾನಪ್ರಿಯಾಲೋಲಿನೀ ।**
**ಕಲ್ಯಾಣೀ ಉಡುರಾಜಬಿಂಬವದನಾ ಧೂಮ್ರಾಕ್ಷಸಂಹಾರಿಣೀ**
**ಚಿದ್ರೂಪೀ ಪರದೇವತಾ ಭಗವತೀ ಶ್ರೀರಾಜರಾಜೇಶ್ವರೀ ॥ ೨ ॥**

ಅಮ್ಮಾ, ಸಕಲ ಜೀವಗಳನ್ನು, ಲೋಕಗಳನ್ನು ಮೋಹಪಾಶಕ್ಕೆ ಈಡುಮಾಡುವ ಮೋಹಿನಿಯು ನೀನೆ. ಮೂರುಲೋಕಗಳ ಸ್ವರೂಪದಲ್ಲಿರುವವಳೂ, ಆನಂದದ ರಾಶಿಯಾಗಿರುವವಳೂ ನೀನೆ. ನೀನು ವಾಗ್ದೇವತೆಯಾದ ವಾಣಿ, ಚಿಗುರಿನಂತಹ ಕೈಗಳಲ್ಲಿ ನುಡಿಸುವ ಕೊಳಲನ್ನು ಪ್ರೀತಿಯಿಂದ ಆಲಿಸುವವಳು, ಚಂದ್ರನಂತೆ ಚೆಲುವಾದ ಮುಖವುಳ್ಳವಳು, ಧೂಮ್ರಾಕ್ಷನೆಂಬ ರಾಕ್ಷಸನನ್ನು ಸಂಹರಿಸಿದವಳು. ಜ್ಞಾನರೂಪಿಣಿ, ಪರದೇವತೆ, ಮಾತೃ ಸ್ವರೂಪಿಣಿಯಾದ ಭಗವತಿ, ನೀನೇ ಶ್ರೀ ರಾಜರಾಜೇಶ್ವರಿಯಾಗಿರುವೆ.

**ಅಂಬಾ ನೂಪುರರತ್ನಕಂಕಣಧರೀ ಕೇಯೂರಹಾರಾವಲೀ**
**ಜಾತೀಚಂಪಕವೈಜಯಂತಿಲಹರೀ ಗ್ರೈವೇಯವೈರಾಜಿತಾ ।**
**ವೀಣಾವೇಣುವಿನೋದಮಂಡಿತಕರಾ ವೀರಾಸನಾಸಂಸ್ಥಿತಾ**
**ಚಿದ್ರೂಪೀ ಪರದೇವತಾ ಭಗವತೀ ಶ್ರೀರಾಜರಾಜೇಶ್ವರೀ ॥ ೩ ॥**

ಅಮ್ಮಾ, ನೀನು ಕಾಲುಗಳಲ್ಲಿ ಗೆಜ್ಜೆ, ಕೈಗಳಲ್ಲಿ ರತ್ನದ ಬಳೆಗಳನ್ನು, ತಲೆಯಲ್ಲಿ ಕೇಯೂರ (ಚೂಡಾಮಣಿ, ಬೈತಲೆ ಬೊಟ್ಟು) ಕುತ್ತಿಗೆಯಲ್ಲಿ ಹಾರಗಳನ್ನು ಧರಿಸಿರುವೆ. ಜಾಜಿ, ಸಂಪಿಗೆ, ವೈಜಯಂತಿ, ವನಮಾಲೆ ಮುಂತಾದ ಪುಷ್ಪಗಳ ಹಾರಗಳ ಸಮೂಹದಿಂದ ನಿನ್ನ ಕಂಠ ಶೋಭಿಸುತ್ತಿದೆ. ವೀಣೆ, ಕೊಳಲು ಮೊದಲಾದ ಗೀತವಾದ್ಯಗಳಿಂದ ಶೋಭಿಸುವ ಕರಗಳಿಂದ ಶೋಭಿಸುತ್ತ ನೀನು ವೀರಾಸನದಲ್ಲಿ ಕುಳಿತಿರುವೆ. ಜ್ಞಾನರೂಪಿಣಿ, ಪರದೇವತೆ, ಮಾತೃಸ್ವರೂಪಿಣಿಯಾದ ಭಗವತಿ, ನೀನೇ ಶ್ರೀ ರಾಜರಾಜೇಶ್ವರಿಯಾಗಿ ವಿರಾಜಿಸುತ್ತಿರುವೆ.

## ಸೂಕ್ತಿಪ್ರಭ

**ಮಾ**ರ್ಗವನ್ನು ಕಲಿಯುವಾಗ, ಅದನ್ನು ಅರ್ಥಮಾಡಿಕೊಳ್ಳುವುದು ಅತ್ಯಂತ ಕಠಿಣ. ಒಂದು ಸಲ ಅರಿತುಕೊಂಡ ಮೇಲೆ ಅದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಇನ್ನೂ ಕಷ್ಟ. ಅದನ್ನು ನೆನಪಿನಲ್ಲಿಟ್ಟುಕೊಂಡ ಬಳಿಕ, ಅದನ್ನು ಆಚರಣೆಗೆ ತರುವುದು ಇನ್ನಷ್ಟು ಕಷ್ಟ. — ಝೆನ್ ಗಾದೆ

**ಕ**ಥೆಗಳನ್ನು ಕೇಳಿ, ಇತರರು ಏನು ಮಾಡಿದರು ಎಂಬುದರಲ್ಲೇ ತೃಪ್ತಿ ಹೊಂದಬೇಡ. ನಿನ್ನ ಕಥೆಯನ್ನು ನೀನು ಗರಿಗೆದರಿಕಂಡುಕೋ. — ರೂಮಿ

**ಜ್ಞಾ**ನವೇ ಪರಬ್ರಹ್ಮ. ಜ್ಞಾನದಿಂದಲೇ ಬಂಧನ. ಇಡೀ ಜಗತ್ತು ಜ್ಞಾನಸ್ವರೂಪ. ಜ್ಞಾನವನ್ನು ಬಿಟ್ಟು ಬೇರೆ ಇಲ್ಲ.

— ವಿಷ್ಣುಪುರಾಣ

**ಅ**ನುಕಂಪದ ಭಾಷೆಯನ್ನು ಮೂಕನೂ ಕೇಳಬಲ್ಲ, ಕುರುಡನೂ ಕಾಣಬಲ್ಲ. — ಮಾರ್ಕ್ ಟ್ವೇನ್

ಯಾರ ನಾಲಿಗೆಯಲ್ಲಿ ಭಗವಂತನ ಪವಿತ್ರ ನಾಮ ನೆಲೆಸಿದೆಯೋ ಆ ಚಂಡಾಲನೂ ಶ್ರೇಷ್ಠನು. — ಭಾಗವತ